‘ನಿಜ. ಯಾರು ಮೊದಲು ಅನ್ನುವುದೇ ಈಗ ಉಳಿದಿರೋದು. ನಾನು ನಿಮಗಿಂತ ಏಳು ವರ್ಷಗಳಿಗೆ ಹಿರಿಯ. ನಾನೇ ಮೊದಲು ಸಾಯೋದು.’

‘ಸಾವಿಗೆ ಅಂಥಾ ಲೆಕ್ಕಾಚಾರವೇನೂ ಇಲ್ಲ. ನನಗಿಂತ ಮೊದಲು ನನ್ನ ತಮ್ಮ ಸತ್ತುಹೋದುದನ್ನು ನೆನಪಿಸಿಕೊಳ್ಳಿ. ನನಗೆ ಮುತ್ತೈದೆ ಸಾವೇ ಇಷ್ಟ.’

ಕ್ರಾಸ್ತಾ ಟೀಚರ ಬಾಯಿಂದ ಇಂಥಾ ಮಾತೆ?

‘ನೀವು ಮೊದಲು ಹೋದರೆ ನಾನು ಹೇಗೆ ಬದುಕಿಯೇನು? ಎಡಗಾಲು ಹೋಗಿದೆ. ಎರಡೂ ಕಣ್ಣು ದೃಷ್ಟಿ ಕಳಕೊಂಡಿದೆ. ಬ್ಯಾಂಕ್ ಚೆಕ್ಕಿಗೆ ಸಹಿ ಹಾಕಲಾಗದಷ್ಟು ಕೈ ನಡುಗುತ್ತಿದೆ. ಯಾವ ಮಾತ್ರೆ ಯಾವಾಗ ತಗೋಬೇಕು ಗೊತ್ತಿಲ್ಲ. ನನ್ನ ಬಟ್ಟೆ ಒಗೆಯಲಾಗದಷ್ಟು ನಿತ್ರಾಣನಾಗಿದ್ದೇನೆ. ನೀವು ಮೊದಲು ಹೋಗಬಾರದು. ಹೋಗಲು ನಾನು ಬಿಡುವುದಿಲ್ಲ.’

ಐವತ್ತು ವರ್ಷಗಳ ಹಿಂದೆ ಅವರು ಮದುವೆಯಾಗಿದ್ದರು. ಆ ಮದುವೆಗೆ ಎರಡೂ ಕಡೆಗಳ ವಿರೋಧವಿತ್ತು. ಮೇಸ್ತ್ರ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರೇ ಮುಂದೆ ನಿಂತು ಮದುವೆ ನಡೆಸಿದ್ದರು. ಬಾಜಾಭಜಂತ್ರಿ ಇರಲಿಲ್ಲ. ಸುಡುಮದ್ದಿನ ಶಬ್ದಮಾಲಿನ್ಯ ಆಗಲಿಲ್ಲ. ಮೇಸ್ತ್ರು ಹಂಚಿದ್ದು ಐನೂರು ಆಹ್ವಾನ ಪತ್ರ. ಆಹ್ವಾನವಿಲ್ಲದೆಯೂ ಬಂದವರು ಒಂದು ಸಾವಿರದ ಐದು ನೂರು! ಊಟ ಸಿಕ್ಕಿದ್ದು ಐನೂರು ಜನರಿಗೆ ಮಾತ್ರ. ಆದರೆ ಯಾರೂ ಗದ್ದಲವೆಬ್ಬಿಸಲಿಲ್ಲ. ಅವರಿಗೆ ಎರಡು ವಿಭಿನ್ನ ಧರ್ಮಗಳ ನಡುವೆ ಅಷ್ಟು ರಾಜಾರೋಷವಾಗಿ ಮದುವೆ ಹೇಗೆ ನಡೆಯುತ್ತದೆಂದು ನೋಡುವ ಕುತೂಹಲವಿತ್ತು ಅಷ್ಟೆ.

ಮದುವೆ ನಡೆದ ಮರುದಿನ ಮಾತೃಮಂಡಳಿಯವರು ಮನೆಗೆ ಬಂದಿದ್ದರು.

‘ನಿಮ್ಮದು ಆದರ್ಶ ವಿವಾಹ ಟೀಚರ್. ಇನ್ನು ನೀವು ನಮ್ಮ ಧರ್ಮ ಸೇರಿಕೊಳ್ಳಿ. ಅದಕ್ಕೆಂದೇ ನಾವು ಬಂದದ್ದು’ ಎಂದಿದ್ದರು.

ಕ್ರಾಸ್ತಾ ಟೀಚರು ನಗುತ್ತಾ, ‘ಮನುಷ್ಯರೆಲ್ಲರೂ ಒಂದೇ ಎಂದು ಭಾವಿಸುವವಳು ನಾನು. ಹಾಗಾಗಿ ಧರ್ಮವೂ ಒಂದೇ. ಅದು ಮಾನವಧರ್ಮ. ಆದುದರಿಂದ ಧರ್ಮ ಬಿಡುವ ಅಥವಾ ಧರ್ಮಕ್ಕೆ ಸೇರುವ ಪ್ರಶ್ನೆ ಇಲ್ಲ’ ಎಂದು ಕಡ್ಡಿ ಮುರಿದಂತೆ ಹೇಳಿದರು. ಮಾತೃಮಂಡಳಿಯವರು ದುರ್ದಾನ ತೆಗೆದುಕೊಂಡಂತೆ ಎದ್ದು ಹೋದರು. ಹೋಗುವಾಗ ‘ಏನು ಧಿಮಾಕು ಆ ಟೀಚರಿಗೆ’ ಎಂದು ಮಾತಾಡಿಕೊಂಡರು.

ಕೆಲವು ದಿವಸಗಳ ಬಳಿಕ ಟೀಚರ್‌ರ ಸೋದರ ಮಾವ ಮನೆಗೆ ಬಂದರು. ‘ಮನುಷ್ಯರು ಅಂದಮೇಲೆ ಸಂಬಂಧಿಕರು ನೆಂಟರು ಬೇಕಾಗುತ್ತಾರೆ. ನೀವು ನಮ್ಮ ಧರ್ಮಕ್ಕೆ ಸೇರಿ ಬಿಡಿ ಮೇಸ್ತ್ರೆ. ನನ್ನ ಎಸ್ಟೇಟಿನಲ್ಲಿ ಅರ್ಧವನ್ನು ನಿಮ್ಮ ಹೆಸರಿಗೆ ರೆಜಿಸ್ಟರ್ ಮಾಡಿ ಬಿಡುತ್ತೇನೆ’ ಎಂದರು. ‘ಜಾತಿ–ಧರ್ಮಗಳನ್ನು ಮೀರಿ ಮನುಷ್ಯರಾಗಿ ಬಾಳಲು ಸಾಧ್ಯ ಎನ್ನುವುದನ್ನು ತೋರಿಸ ಹೊರಟಿದ್ದೇವೆ. ದಯವಿಟ್ಟು ಅಡ್ಡಿ ಮಾಡಬೇಡಿ’ ಎಂದು ಮೇಸ್ತ್ರು ಕೈ ಮುಗಿದರು. ಟೀಚರ ಸೋದರ ಮಾವ ಭುಸುಗುಟ್ಟುತ್ತಾ ಹೊರಟುಹೋದರು.

ಮಕ್ಕಳಾದ ಮೇಲೂ ಧರ್ಮದ ಪ್ರಶ್ನೆ ಅವರನ್ನು ಕಾಡಲಿಲ್ಲ. ಮಕ್ಕಳಿಗೆ ಪ್ರಕೃತಿಯ ಸಂಕೇತಗಳ ಹೆಸರಿಟ್ಟರು. ನಾಮಕರಣ, ಚವಲ ಎಂದು ಬಂಧುಬಾಂಧವರಿಗೆ ತೊಂದರೆ ಕೊಡಲಿಲ್ಲ. ಶಾಲೆಯಲ್ಲಿ ಜಾತಿ ಕಾಲಂನಲ್ಲಿ ‘ಮನುಷ್ಯ’ ಮತ್ತು ಧರ್ಮ ಕಾಲಂನಲ್ಲಿ ‘ಮಾನವ’ ಎಂದು ದಾಖಲಿಸಿದರು. ಮುಖ್ಯೋಪಾಧ್ಯಾಯರು ‘ಇಂಥ ಜಾತಿಯಾಗಲೀ ಧರ್ಮ ಆಗಲಿ ಇಲ್ಲ ಮೇಸ್ತ್ರೇ’ ಎಂದು ಆಕ್ಷೇಪಿಸಿದಾಗ – ‘ಇತ್ತು, ಈಗ ನಮ್ಮಿಂದ ಮುಂದುವರಿಯುತ್ತಿದೆ’ ಎಂದು ಅವರನ್ನು ಮೇಸ್ತ್ರು ಸಮಾಧಾನಿಸಿದರು.

ಮಕ್ಕಳಾದ ಮೇಲೆ ಎರಡೂ ಕಡೆಯವರು ಮೇಸ್ತ್ರನ್ನು ಮತ್ತು ಟೀಚರನ್ನು ಹತ್ತಿರ ಸೇರಿಸಿದರು. ಮೇಸ್ತ್ರು ಟೀಚರಿಗೆ ಒಂದು ಬಾರಿ ಹೇಳಿದ್ದರು. ‘ನಿಮ್ಮನ್ನು ಬೇಕಾದರೆ ಪ್ರತಿ ಭಾನುವಾರ ಚರ್ಚಿಗೆ ಕರೆದೊಯ್ಯುತ್ತೇನೆ. ಆದರೆ ಚರ್ಚಿನ ಒಳ ಬಂದು ಮೊಣಕಾಲೂರಲು ಹೇಳಬೇಡಿ.’

ಟೀಚರಿಗೆ ನಗು ಬಂತು. ‘ನಮ್ಮಲ್ಲಿ ಚರ್ಚಿನ ಹೊರಗೆ ಮದುವೆಯಾಗುವುದೆಂದರೆ ಜಾತಿ ಬಿಟ್ಟ ಹಾಗೆ. ನಾನಿನ್ನು ಚರ್ಚಿಗೆ ಹೋದರೆ ಪ್ರಾರ್ಥಿಸಬಹುದು. ನನಗೆ ಪಾದ್ರಿಗಳು ಪ್ರಸಾದ ಕೊಡುವುದಿಲ್ಲ.’

‘ಪ್ರಾರ್ಥಿಸಲಿಕ್ಕಾದರೂ ಹೋಗಬಹುದಲ್ಲಾ?’

‘ನಾನು ಚರ್ಚಿನ ಕೋಯರ್ ಗ್ರೂಪಿನ ಮುಖ್ಯಸ್ಥೆಯಾಗಿದ್ದವಳು. ಈಗ ಅನಿಸುತ್ತಿದೆ ಆ ಹಾಡು, ಪ್ರಾರ್ಥನೆ ಯಾವುದೂ ಸಹಜವಲ್ಲವೆಂದು. ಇನ್ನು ನಾನು ಪ್ರಾರ್ಥಿಸಲಿಕ್ಕಾಗಿ ಚರ್ಚಿಗೆ ಹೋಗುವ ಪ್ರಶ್ನೆಯೇ ಇಲ್ಲ.’

ಮೇಸ್ತ್ರ ಮನೆಗೆ ಊರ ಪರವೂರ ಜನ ದೇಣಿಗೆ ಸಂಗ್ರಹಕ್ಕೆ ಬರುತ್ತಿದ್ದರು. ಸಾಮಾಜಿಕ ಕಾರ್ಯಗಳೆಂದಾದರೆ ಮೇಸ್ತ್ರು ತಮ್ಮಿಂದ ಸಾಧ್ಯವಿರುವಷ್ಟು ಕೊಡುತ್ತಿದ್ದರು. ಧಾರ್ಮಿಕ ಕಾರ್ಯಗಳಿಗೆ ಕೊಡಲು ಹಿಂದೇಟು ಹಾಕುತ್ತಿದ್ದರು. ಆಗೆಲ್ಲಾ ಟೀಚರು ಅವರನ್ನು ಒಳ ಕರೆದು ‘ನೋಡಿ, ನಿಮಗೆ ನಂಬಿಕೆ ಇದೆಯೋ ಇಲ್ಲವೋ ಅನ್ನುವುದು ಮುಖ್ಯವಲ್ಲ. ಊರ ಜನರೊಡನೆ ಹೊಂದಿಕೊಂಡು ಹೋಗಬೇಕಾಗುತ್ತದೆ. ನಾಳೆ ಕಷ್ಟಕ್ಕಾಗುವಾಗ ಬೇಕಾದವರು ಊರವರೇ ಅಲ್ಲವೇ?’ ಎಂದು ಅನುನಯಿಸುತ್ತಿದ್ದರು.

‘ಕಷ್ಟಕ್ಕಾಗುವಾಗ ಎಂದರೇನರ್ಥ?’

‘ನಾವು ಸತ್ತ ಮೇಲೆ ಗುಂಡಿ ತೆಗೆದು ಹೂಳಲಿಕ್ಕಾದರೂ ನಾಲ್ಕು ಜನ ಬೇಡವೇ?’

ಮೇಸ್ತ್ರಿಗೆ ನಗು ಬಂತು. ‘ಅದೋ ವಿಷಯ. ನನ್ನ ದೇಹವನ್ನು ದೊಡ್ಡಾಸ್ಪತ್ರೆಗೆ ದಾನ ಮಾಡಲಿದ್ದೇನೆ. ನೀವೂ ಹಾಗೆ ಮಾಡಿಬಿಡಿ.’

‘ಇಲ್ಲಪ್ಪಾ, ಸತ್ತ ಮೇಲೂ ನನ್ನ ನಗ್ನ ದೇಹವನ್ನು ಯಾರ್ಯಾರೋ ನೋಡೋದು; ಏನಾದರೂ ಆಡಿಕೊಳ್ಳುವುದು ನನಗಿಷ್ಟವಿಲ್ಲ.’

‘ಹಾಗಾದರೆ ನಿಮ್ಮ ಪಾರ್ಥಿವ ಶರೀರಕ್ಕೆ ಅಗ್ನಿಸಂಸ್ಕಾರ ಮಾಡಬೇಕೆ?’

‘ಬೇಡ. ಈ ದೇಹ ಸುಟ್ಟು ಹೋಗುವುದನ್ನು ಕೂಡಾ ನಾನು ಊಹಿಸಲಾರೆ.’



‘ಮತ್ತೇನು ಮಾಡಬೇಕು?’

‘ನಗರದಿಂದ ಒಂದು ಶವ ಪೆಟ್ಟಿಗೆ ತರಿಸಿ ನಾನು ಬೆಳೆಸಿದ ತೋಟದ ಮಧ್ಯೆ ಹೂತು ಬಿಡಿ.’

ಅವರ ಅರ್ಧ ಎಕರೆ ಭೂಮಿಯಲ್ಲಿ ನೂರ ಐವತ್ತು ಅಡಿಕೆ ಗಿಡ ಟೀಚರು ನೆಟ್ಟಿದ್ದರು. ಅವುಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಆದರೆ ಅಡಿಕೆ ಗಿಡಗಳಿಗೆ ಮಾಡುವ ಖರ್ಚಿನ ಕಾಲು ಭಾಗದಷ್ಟೂ ಆದಾಯ ಅಡಿಕೆಯಿಂದ ಬರುತ್ತಿರಲಿಲ್ಲ.

‘ಈ ಭಾಗ್ಯಕ್ಕೆ ನಮಗೆ ಕೃಷಿ ಯಾಕೆ?’

ಮೇಸ್ತ್ರ ಪ್ರಶ್ನೆಗೆ ಟೀಚರು ನಗುತ್ತಿದ್ದರು.

‘ನಿಮ್ಮದು ಸಾಹಿತ್ಯ ಕೃಷಿ. ನನ್ನದು ನಿಜವಾದ ಕೃಷಿ. ಸುಮ್ಮನೆ ಕಾಲ ಕಳೆಯುವುದಕ್ಕಿಂತ ಗಿಡಗಳೊಡನೆ ಮಾತಾಡುತ್ತಾ ಕಾಲ ಕಳೆಯುವುದು ತುಂಬಾ ಸಂತೋಷ ನೀಡುತ್ತದೆ.’